**ಸಾಕ್ಷಿಯನ್ನು ಇಂದು ದಿನಾಂಕಃ 16-02-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನನ್ನ ಊರು ತೇರದಾಳ . ನಾನು ತೇರದಾಳನಲ್ಲಿ ಸುಮಾರು 60 ವರ್ಷಗಳಿಂದ ಇರುತ್ತೇನೆ. ನನ್ನ ಸಹೋದರ ದಾವಾ ಆಸ್ತಿಯನ್ನು ಶಿವಕ್ಕ ಬೂದಪ್ಪ ಗಾಡಿವಡ್ಡರ ರವರಿಂದ ಖರೀದಿ ಮಾಡಿರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಮಾಡಿರುತ್ತೇನೆ. ನನ್ನ ಸಹೋದರ ದಾವಾ ಆಸ್ತಿಯನ್ನು 30 ವರ್ಷಗಳ ಪೂರ್ವದಲ್ಲಿ ಖರೀದಿ ಮಾಡಿದ್ದರು. ನನ್ನ ಸಹೋದರ ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ಪುರಸಭೆಗೆ ದಾವಾ ಆಸ್ತಿಗೆ ತನ್ನ ಹೆಸರನ್ನು ಹಚ್ಚಿಕೊಂಡಿರುತ್ತಾರೆ. ನಾನು ದಾವಾ ಆಸ್ತಿಯಲ್ಲಿ 32 ವರ್ಷಗಳಿಂದ ಇರುತ್ತಿದ್ದೇನೆ. ನನ್ನ ಸಹೋದರ ದಾವಾ ಆಸ್ತಿಯ ಕುರಿತು ನನ್ನ ಹೆಸರಿಗೆ ಭಕ್ಷಿಸ್ ಪತ್ರವನ್ನು ಮಾಡಿದ್ದು , ಸದರಿ ಭಕ್ಷಿಸ್ ಪತ್ರವನ್ನು ಮಾಡಿ 15 ವರ್ಷಗಳು ಆಗಿರುತ್ತದೆ. ದಾವಾ ಆಸ್ತಿಯು ಯಾವ ಕಾಲಕ್ಕೂ ಶಿವಕ್ಕ ಬೂದಪ್ಪ ಗಾಡಿವಡ್ಡರ ರವರ ಹೆಸರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿ ಸದರಿ ಶಿವಕ್ಕ ಬೂದಪ್ಪ ಗಾಡಿವಡ್ಡರ ರವರ ಹೆಸರಿಗೆ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮನೆ ಇರುತ್ತದೆ. ನನ್ನ ಸಹೋದರ ದಾವಾ ಆಸ್ತಿಯಲ್ಲಿ ಕಬ್ಜೆಯಲ್ಲಿ ಇದ್ದು , ನಂತರ 2015 ರಲ್ಲಿ ನನ್ನ ಸಹೋದರ ನನ್ನ ಪರ ಭಕ್ಷಿಸ್ ಪತ್ರವನ್ನು ಮಾಡಿದ ನಂತರ ಸದರಿ ದಾವಾ ಆಸ್ತಿಯಲ್ಲಿ ನಾನು ಕಬ್ಜೆ ಇದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಕಬ್ಜೆಯಲ್ಲಿ ಇದ್ದೇನೆ ಎಂದು ತೋರಿಸಲು ಸುಳ್ಳು ಪುರಸಭೆ ಕರವನ್ನು ತುಂಬಿದ ರಸೀದಿಗಳನ್ನು ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪುರಸಭೆಯದ್ದು ಇದ್ದು ಶಿವಕ್ಕ ಬೂದಪ್ಪ ಗಾಡಿವಡ್ಡರ ರವರು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪುರಸಭೆಗೆ ಸಂಬಂಧಪಟ್ಟ ದಾವಾ ಆಸ್ತಿಯನ್ನು ನಾನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯವು ನನ್ನ ಕಬ್ಜೆ ಇರದೇ ಇದ್ದರು ಹಾಗೂ ಪುರಸಭೆಗೆ ಸಂಬಂಧಪಟ್ಟ ಆಸ್ತಿ ಇದ್ದರು ಸಹ ನಾನು ಕಬ್ಜೆಯಲ್ಲಿ ಇರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-
**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**